








**ಬಾಸ್:** ನಾಳೆಯ ಕೆಲಸವನ್ನು ಇಂದೇ ಮಾಡಿ ಎಂದು ಆಫೀಸಿನಲ್ಲಿ ಬೋರ್ಡ್ ಹಾಕಿದ್ದು ತಪ್ಪಾಯಿತು.
**ಗುಮಾಸ್ತ:** ಯಾಕೆ ಸರ್? ಏನಾಯ್ತು..?
**ಬಾಸ್:** ನಾಳೆ ಭಾನುವಾರದ ಬದಲಿಗೆ ಇಂದೇ ಎಲ್ಲರೂ ಆಫೀಸಿಗೆ ಬರದೆ ಮನೇಲಿ ಉಳಿದ್ಬಿಟ್ಟಿದ್ದಾರೆ.

***

**ಮುದುಕಿ:** ರೀ, ನಮ್ಮನೆ ಎದುರಿಗೆ ಇರೋ ಗುಜರಿ ಅಂಗಡಿಯ ಹುಡುಗ ನನ್ನ ನೋಡಿ ದಿನಾ ನಗ್ತಾನೆ.
**ಮುದುಕ:** ಹುಚ್ಚರನ್ನು ಕಂಡು ಹುಚ್ಚ ನಗ್ತಾರಂತೆ. ಅವ್ನೂ ಬಹುಶಃ ಅದೇ ಆಗಿರಬಹುದು.

***

ಗುಂಡನನ್ನು ನೇಣು ಹಾಕಬೇಕಾದರೆ...
**ಜೈಲರ್:** ನಿನ್ನ ಕೊನೆ ಆಸೆ ಏನು?
**ಗುಂಡ:** ನನ್ನನ್ನು ತಲೆ ಕೆಳಗೆ, ಕಾಲು ಮೇಲೆ ಮಾಡಿ ನೇಣು ಹಾಕಿ ಸಾಕು.

***

**ಪೇದೆ:** ರಾಮನವಮಿ ಪ್ರಯುಕ್ತ ನಿನ್ನೆ ಜೈಲಿನ ಕೈದಿಗಳು 'ಸಂಪೂರ್ಣ ರಾಮಾಯಣ' ನಾಟಕ ಆಡಿದರು ಸರ್.
**ಜೈಲಿನ ಅಧಿಕಾರಿ:** ಅದಕ್ಕೇನೀಗ?
**ಪೇದೆ:** ಹನುಮಂತನ ಪಾತ್ರ ವಹಿಸಿದ ಕೈದಿ ಸಂಜೀವಿನಿ ಸಸ್ಯ ತರಲು ಹೋದವನು ಇನ್ನೂ ಬಂದೇ ಇಲ್ಲ ಸರ್.

***

ಕಳ್ಳರಿಬ್ಬರು ದರೋಡೆ ಮಾಡಿ ಬಂದು ಒಂದು ಕಡೆ ಕುಳಿತರು.
**ಒಬ್ಬ ಕಳ್ಳ:** ಎಷ್ಟು ಹಣ ನೋಡೋಣವೇನೋ?
**ಇನ್ನೊಬ್ಬ ಕಳ್ಳ:** ನಂಗೆ ನಿದ್ದೆ ಬರುತ್ತಿದೆ ಮನೆಗೆ ಹೋಗೋಣಪ್ಪ. ಹೇಗಿದ್ದರು ನಾಳೆ ಪೇಪರ್‌ನಲ್ಲಿ ಬರುತ್ತಲ್ಲ.

***

**ಸೇಲ್ಸ್ ಮ್ಯಾನೇಜರ್:** ಮಾರಾಟ ಮಾಡುವುದರ ಬಗ್ಗೆ ನಿಮಗೇನಾದರೂ ಅನುಭವವಿದೆಯೇ?
**ಗುಂಡ:** ಸಾಕಷ್ಟು ಇದೆ ಸರ್. ನಾನು ನನ್ನ ಮನೆ ಮಾರಿದ್ದೇನೆ, ಕಾರು ಮಾರಿದ್ದೇನೆ, ಟಿ.ವಿ. ಮಾರಿದ್ದೇನೆ. ನನ್ನ ಹೆಂಡತಿಯ ಮೈಮೇಲಿನ ಎಲ್ಲ ಆಭರಣಗಳನ್ನೂ.
ಸೇಲ್ಸ್ ಮ್ಯಾನೇಜರ್ ಮೂರ್ಛೆ ಹೋದರು.

***

**ಸಂದರ್ಶಕ:** ನೀನ್ಯಾಕೆ ಹಿಂದಿನ ಕೆಲಸ ಬಿಟ್ಟೆ?
**ಗುಂಡ:** ನನ್ನ ಕಂಪನಿಯು ಕಚೇರಿಯನ್ನು ಸ್ಥಳಾಂತರಿಸಿತು. ಆದರೆ ನನಗೆ ಹೊಸ ಕಚೇರಿಯ ವಿಳಾಸವನ್ನೇ ತಿಳಿಸಲಿಲ್ಲ.

***

**ಬಾಸ್:** ಯಾಕೋ ಆಫೀಸಿಗೆ ಲೇಟು?
**ಕ್ಲರ್ಕ್:** ಅಡುಗೆ ಮಾಡಿ ಹೆಂಡ್ತಿಗೆ ಟಿಫಿನ್ ಕೊಟ್ಟು ಬಂದೆ!
**ಬಾಸ್:** ನಾಚಿಕೆ ಆಗಲ್ವಾ? ನಾನೂ ಅಡುಗೆ ಮಾಡಿ, ಪಾತ್ರೆ ತೊಳೆದು ಬೇಗ ಬರ್ತೀನಿ. ಬೇಗ ಎದ್ದು ಕೆಲಸ ಮುಗಿಸಿ ನಾಳೆಯಿಂದ ಸರಿಯಾದ ಸಮಯಕ್ಕೆ ಬಾ.

***

ರಾಜಕಾರಣ ಪ್ರವೇಶ ಮಾಡುತ್ತಿದ್ದ ಮಗನಿಗೆ ಅಪ್ಪ ಹೇಳಿದ್ದು ಹೀಗೆ...
**ಅಪ್ಪ:** ಮಗನೇ, ರಾಜಕಾರಣದಲ್ಲಿ ಪ್ರಾಮಾಣಿಕತೆ ಜತೆಗೆ ವಿವೇಚನೆ ಮುಖ್ಯ.
**ಮಗ:** ಪ್ರಾಮಾಣಿಕತೆ ಎಂದರೆ?
**ಅಪ್ಪ:** ಅಂದರೆ, ಜನರಿಗೆ ನೀನು ಕೊಟ್ಟ ಮಾತಿಗೆ ತಕ್ಕಂತೆ ನಡೆದುಕೊಳ್ಳಬೇಕು.
**ಮಗ:** ಹಾಗಾದರೆ ವಿವೇಚನೆ ಎಂದರೇನು?
**ಅಪ್ಪ:** ಮಾತು ಕೊಡದೇ ಇರುವುದು.

***




**ಗುಂಡ:** ಡಾಕ್ಟ್ರೆ, ನನ್ನ ಹೆಂಡತಿ ಮದ್ಯಪಾನದ ತೊಂದರೆಯಿಂದ ಬಳಲುತ್ತಿದ್ದಾಳೆ.
**ಡಾಕ್ಟರ್:** ಆಕೆ ಅಷ್ಟೊಂದು ಕುಡೀತಾಳಾ?
**ಗುಂಡ:** ಇಲ್ಲ ಡಾಕ್ಟ್ರೆ. ಕುಡಿಯೋದು ನಾನು, ತೊಂದರೆ ಮಾತ್ರ ಅವಳಿಗೆ.

***

**ಪಮ್ಮಿ:** ನನ್ನ ಮೊಬೈಲ್ ಚಾರ್ಜ್ ಆಗಿದೆಯಾ?
**ಗುಂಡ:** ಆಗಿದೆ.
**ಪಮ್ಮಿ:** ಮತ್ತೆ ಲೋ ಬ್ಯಾಟರಿ ಅಂತ ತೋರಿಸ್ತಿದೆ?
**ಗುಂಡ:** ರಾತ್ರಿಯೆಲ್ಲಾ ಚಾರ್ಜ್‌ಗೆ ಇಟ್ರೆ ಮೊಬೈಲ್ ಬ್ಲಾಸ್ಟ್ ಆಗುತ್ತೆ ಅಂತಿದ್ದೆ ಅಲ್ವಾ... ಅದಕ್ಕೆ ಬ್ಯಾಟರಿ ತೆಗೆದು ಚಾರ್ಜ್‌ಗೆ ಹಾಕಿದ್ದೆ.

ಸಂಗ್ರಹ: ಉಮೇಶ್ ನಿಟ್ಟೂರು, ಹಾಸನ